(13)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕುಶಾಲನಗರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರಾಧಿಕಾರವನ್ನು ಘೋಷಿಸುವ ಬಗ್ಗೆ.

ಓದಲಾಗಿದೆ: ಕಡತ ಸಂಖ್ಯೆ: ನಅಇ 483 ಮ್ಯೆಅಪ್ರಾ 2006, ದಿನಾಂಕ: 20.11.07 ರಲ್ಲಿ ನಗರ ಯೋಜನಾ ನಿರ್ದೇಶಕರು, ಬೆಂಗಳೂರು ಇವರು ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ:

ಮೇಲೆ ಓದಲಾದ ಕಡತದಲ್ಲಿ ನಗರ ಯೋಜನಾ ನಿರ್ದೇಶಕರು, ಬೆಂಗಳೂರು ಇವರು ಕುಶಾಲನಗರ ಪಟ್ಟಣದ ಹಾಲಿ ಪಟ್ಟಣ ಪಂಚಾಯಿತಿ ಎಲ್ಲೆಯು 320 ಹೆಕ್ಟೇರ್‌ಗಳಿದ್ದು, ಹಾಲಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹೊರಗೆ ಸರ್ಕಾರಿ ಪಾಲಿಟೆಕ್ನಿಕ್/ ಇಂಜಿನೀಯರಿಂಗ್ ಕಾಲೇಜ್, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ 250 ಎಕರೆ ವಿಸ್ತೀರ್ಣದ ಬಡಾವಣೆ ಇದ್ದು, ಅಕ್ಕಪಕ್ಕದಲ್ಲಿ ಅನೇಕ ಅಭಿವೃದ್ಧಿಗಳು ಬಂದಿರುವುದರಿಂದ/ ಬರುತ್ತಿರುವುದರಿಂದ ಇವುಗಳನ್ನು ಯೋಜನಾಬದ್ಧವಾಗಿ ನಿಯಂತ್ರಿಸಲು ಈ ಪ್ರದೇಶಗಳನ್ನು ಸಹ ಸೇರಿಸಿಕೊಂಡು 2021ನೇ ಇಸವಿಗೆ ಹೆಚ್ಚಾಗಬಹುದಾದ 26,000 ಜನಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ಹಾಗೂ ಜನಸಾಂದ್ರತೆಯನ್ನು ಪ್ರತಿ ಹೆಕ್ಟೇರ್‌ಗೆ [illegible] ಎಂದು ಪರಿಗಣಿಸಿ ಒಟ್ಟಾರೆ 1105 ಹೆಕ್ಟೇರ್ ವಿಸ್ತೀರ್ಣಕ್ಕೆ ಸ್ಥಳೀಯ ಯೋಜನಾ ಪ್ರದೇಶವೆಂದು ಗುರುತಿಸಲಾಗಿದ್ದು, ಪ್ರಸ್ತಾವಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ 5 ಗ್ರಾಮಗಳನ್ನು ಸೇರಿಸಿ ಕೆ.ಟಿ.ಸಿ.ಪಿ. ಕಾಯ್ದೆ, ಕಲಂ 4(ಎ) ರನ್ವಯ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲು ಅಭಿಪ್ರಾಯವನ್ನು ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. ನಅಇ 483 ಮ್ಯೆಅಪ್ರಾ 2006, ಬೆಂಗಳೂರು, ದಿನಾಂಕ: 18.2.2008

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಕುಶಾಲನಗರ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ವಿವರಗಳನ್ನು ಅನುಬಂಧ-1 ರಲ್ಲಿ ತೋರಿಸಿರುವಂತೆ 5 ಗ್ರಾಮಗಳು ಸೇರಿ ಅನುಬಂಧ-2 ರಲ್ಲಿನ ಎಲ್ಲೆಯ ವಿವರಣೆಯಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 4(ಎ) ರನ್ವಯ ಕುಶಾಲನಗರ ಯೋಜನಾ ಪ್ರದೇಶವೆಂದು ಘೋಷಿಸಿ ಆದೇಶಿಸಿದೆ.

ಭಾರತ ರಾಷ್ಟ್ರಪತ್ಯಕ್ಷರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ.ಟಿ.ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಇವರಿಗೆ:

೨. ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
೩. ನಗರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಮೈಸೂರು.
೪. ನಗರ ಯೋಜನಾ ಸಹಾಯಕ ನಿರ್ದೇಶಕರು, ನಗರ ಯೋಜನಾ ಇಲಾಖೆ, ಮಡಿಕೇರಿ.
೫. ಮುಖ್ಯಾಧಿಕಾರಿಗಳು, ಕುಶಾಲನಗರ ಪಟ್ಟಣ ಪಂಚಾಯತಿ, ಕುಶಾಲನಗರ.
೬. ಘನತೆವೆತ್ತ ರಾಜ್ಯಪಾಲರ ಸಲಹೆಗಾರರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
೭. ಕರ್ನಾಟಕ ರಾಜ್ಯಪತ್ರ.
೮. ಸರ್ಕಾರದ ಕಾರ್ಯದರ್ಶಿಗಳ/ಜಂಟಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
೯. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

ಅನುಬಂಧ - I

ಪ್ರಸ್ತಾವಿತ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ವಿವರ

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಸರ್ವೆ ಸಂಖ್ಯೆ	ವಿಸ್ತೀರ್ಣ (ಎಕರೆಗಳಲ್ಲಿ)	ಷರಾ
1.	ಮುಳ್ಳುಸೋಗೆ	ಪೂರ್ಣ ಕಂದಾಯ ಗ್ರಾಮ	763.94	ಪೂರ್ಣ ಗ್ರಾಮ
2.	ಬೈಚನಹಳ್ಳಿ	ಪೂರ್ಣ ಕಂದಾಯ ಗ್ರಾಮ	321.20	ಪೂರ್ಣ ಗ್ರಾಮ
3.	ಗುಮ್ಮನ ಕೊಲ್ಲಿ	ಸ.ನಂ.1ನ್ನು ಹೊರತುಪಡಿಸಿ ಪೂರ್ಣ ಕಂದಾಯ ಗ್ರಾಮ	572.12	ಭಾಗಶ: ಗ್ರಾಮ
4.	ಕೂಡ್ಲೂರು	ಸ.ನಂ.2 ಹಾಗೂ 31 ನ್ನು ಹೊರತುಪಡಿಸಿ ಪೂರ್ಣ ಕಂದಾಯ ಗ್ರಾಮ	728.13	ಭಾಗಶ: ಗ್ರಾಮ
5.	ಮಾದಾಪಟ್ಟಣ	ಸ.ನಂ.1 ರಿಂದ 42, 50 ರಿಂದ 62, 63 ರಿಂದ 108	345.61	ಭಾಗಶ: ಗ್ರಾಮ
		ಒಟ್ಟು	2731.00 ಎಕರೆ ಅಥವಾ 1105.00 ಹೆಕ್ಟೇರ್	

(ಸಿ.ಟಿ.ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಸಂಖ್ಯೆ. ನಅಇ 483 ಮ್ಯೆಅಪ್ರಾ 2006

ಅನುಬಂಧ - II

ಪ್ರಸ್ತಾವಿತ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಸೆರಹದ್ದಿನ ವಿವರ

ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯು ಮುಳ್ಳುಸೋಗೆ ಗ್ರಾಮದ ಸ.ನಂ. 226 ರ ಪೂರ್ವದ ಮೂಲೆ ಅಂದರೆ ಮೈಸೂರು - ಬಂಟ್ವಾಳ ರಾಜ್ಯ ಹೆದ್ದಾರಿ ಹಾಗೂ ಕಾವೇರಿ ನದಿಯ ಉತ್ತರದ ದಂಡೆಯು ಸಂಧಿಸುವ ಬಿಂದುವಿನಿಂದ ಪ್ರಾರಂಭವಾಗಿ ಪಶ್ಚಿಮಾಭಿಮುಖವಾಗಿ ಇದೇ ಗ್ರಾಮಗಡಿಯ ಮೂಲಕ ಕಾವೇರಿ ನದಿಯ ಉತ್ತರದ ದಂಡೆಯಲ್ಲಿ ಬಲಿಸಿ ಮುಳ್ಳುಸೋಗೆ ಹಾಗೂ ಬೈಚನಹಳ್ಳಿ ಗ್ರಾಮಗಡಿ ಕೂಡುವ ಬೈಚನಹಳ್ಳಿ ಗ್ರಾಮದ ಸ.ನಂ. ೫೫ ರ ಆಗ್ನೇಯ ಮೂಲೆಯನ್ನು ತಲುಪುತ್ತದೆ. ನಂತರ ಬೈಚನಹಳ್ಳಿ ಗ್ರಾಮ ಗಡಿಯಲ್ಲಿ ಪಶ್ಚಿಮಾಭಿಮುಖವಾಗಿ ಮುಂದುವರಿದು ಬೈಚನಹಳ್ಳಿ ಹಾಗೂ ಮಾದಾಪಟ್ಟಣ ಗ್ರಾಮಗಡಿ ಸಂಧಿಸುವ ಮಾದಾಪಟ್ಟಣ ಗ್ರಾಮದ ಸ.ನಂ.77 ರ ಆಗ್ನೇಯ ಮೂಲೆಯನ್ನು ತಲುಪಿ ನಂತರ ಮಾದಾಪಟ್ಟಣ ಗ್ರಾಮದ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸಿ ಮಾದಾಪಟ್ಟಣ ಗ್ರಾಮದ ಸ.ನಂ. 103/2 ರ ನೈರುತ್ಯ ಮೂಲೆಯನ್ನು ತಲುಪುತ್ತದೆ. ತದನಂತರ ಉತ್ತರಕ್ಕೆ ತಿರುಗಿ ಇದೇ ಗ್ರಾಮದ ಗಡಿಯ ಮೂಲಕ ಸಾಗಿ ಸ.ನಂ.99 ರ ವಾಯುವ್ಯ ಮೂಲೆಯನ್ನು ತಲುಪಿದ ನಂತರ ಕೆರೆಯ ದಕ್ಷಿಣ ಅಂಚಿನಲ್ಲಿ ಚಲಿಸಿ ಮಾದಾಪಟ್ಟಣ ಗ್ರಾಮದ ಸ.ನಂ. 97 ರ ನೈರುತ್ಯ ಮೂಲೆಯಲ್ಲಿ ಉತ್ತರಕ್ಕೆ ತಿರುಗಿ ಸದರಿ ಸರ್ವೆ ಸಂಖ್ಯೆಯ ಗಡಿಯ ಮೂಲಕ ಚಲಿಸಿ ಸ.ನಂ. 61 ರ ಆಗ್ನೇಯ ಮೂಲೆ ತಲುಪಿ ವಾಯುವ್ಯಕ್ಕೆ ತಿರುಗಿ ಮಾದಾಪಟ್ಟಣ ಸರ್ವೆ ನಂ.57 ರ ವಾಯುವ್ಯ ಮೂಲೆ ತಲುಪಿ ಇಲ್ಲಿಂದ ಸದರಿ ಮಾದಾಪಟ್ಟಣ ಸರ್ವೆ ನಂ.57 ಹಾಗೂ 55 ರ ಪಶ್ಚಿಮ ಗಡಿ ಅಥವಾ ರಸ್ತೆಯ ಪೂರ್ವದ ಗಡಿಯಲ್ಲಿ ಸಾಗಿ ಸರ್ವೆ ನಂ. 49 ರ ಆಗ್ನೇಯ ಮೂಲೆಯಲ್ಲಿ ರಸ್ತೆಯನ್ನು ದಾಟಿ ಸರ್ವೆ ನಂ. 51 ರ ವಾಯುವ್ಯ ಮೂಲೆ ಸೇರುತ್ತವೆ. ಇಲ್ಲಿಂದ ಉತ್ತರಾಭಿಮುಖವಾಗಿ ಚಲಿಸಿ ಮಾದಾಪಟ್ಟಣ ಸರ್ವೆ ನಂ. 51, 42 ರ ಪಶ್ಚಿಮಗಡಿಗಳಲ್ಲಿ ಮುಂದುವರೆದು ಮಾದಾಪಟ್ಟಣ ಸರ್ವೆ ನಂ. 9 ರಲ್ಲಿನ ಕೆರೆಯ ನೈರುತ್ಯ ಮೂಲೆಯಲ್ಲಿ ಪಶ್ಚಿಮಕ್ಕೆ ತಿರುಗಿ ಕೆರೆಯ ಅಂಚಿನಲ್ಲಿ ಸಾಗಿ ಕೆರೆ ಆಗ್ನೇಯ ಮೂಲೆ ಹಾಗೂ ರಸ್ತೆ ಸಂಧಿಸುವ ಬಿಂದುವಿನಲ್ಲಿ ಈಶಾನ್ಯಾಭಿಮುಖವಾಗಿ ರಸ್ತೆಯ ಪಶ್ಚಿಮ ಅಂಚಿನಲ್ಲಿ ಚಲಿಸಿ ಮಾದಾಪಟ್ಟಣ ಗ್ರಾಮದ ಸ.ನಂ.4 ರ ಈಶಾನ್ಯ ಮೂಲೆಯನ್ನು ತಲುಪಿದ ನಂತರ ರಸ್ತೆಯನ್ನು ದಾಟಿ ಪೂರ್ವ ದಿಕ್ಕಿಗೆ ತಿರುಗಿ ಗ್ರಾಮ ಗಡಿಯ ಮೂಲಕ ಸಾಗಿ ಮಾದಾಪಟ್ಟಣ ಮತ್ತು ಬೈಚನಹಳ್ಳಿ ಗ್ರಾಮ ಗಡಿಗಳು ಸಂಧಿಸುವ ಬಿಂದುವನ್ನು ದಾಟಿ ಮುಳ್ಳುಸೋಗೆ, ಬೈಚನಹಳ್ಳಿ ಹಾಗೂ ಗೊಂದಿ ಬಸವನಹಳ್ಳಿ ಗ್ರಾಮ ಗಡಿಗಳು ಸಂಧಿಸುವ ಬಿಂದುವನ್ನು ತಲುಪಿ ನಂತರ ಉತ್ತರ ದಿಕ್ಕಿಗೆ ತಿರುಗಿ ಮುಳ್ಳುಸೋಗೆ ಗ್ರಾಮದ ಗಡಿಯಲ್ಲಿ ಮುಂದುವರೆದು ಗುಮ್ಮನಕೊಲ್ಲಿ ಗ್ರಾಮದ ಸ.ನಂ. 1/1 ರ ಆಗ್ನೇಯ ಮೂಲೆ ತಲುಪುತ್ತದೆ. ನಂತರ ಸದರಿ ಸರ್ವೆ ನಂ.೨ ಪೂರ್ವದ ಗಡಿಯಲ್ಲಿ ಉತ್ತರಾಭಿಮುಖವಾಗಿ ಮುಂದುವರೆದು ಕೂಡ್ಲೂರು ಗ್ರಾಮದ ಸ.ನಂ.3 ರ ನೈರುತ್ಯ ಮೂಲೆ ತಲುಪಿ ನಂತರ ಸದರಿ ಸರ್ವೆ ಸಂಖ್ಯೆಯ ಪಶ್ಚಿಮ ಗಡಿಯಲ್ಲಿ ಉತ್ತರಾಭಿಮುಖವಾಗಿ ಚಲಿಸಿ ಕೂಡ್ಲೂರು ಗ್ರಾಮದ ಗ್ರಾಮ ಗಡಿಯನ್ನು ತಲುಪುತ್ತದೆ. ಈ ಗ್ರಾಮಗಡಿಯ ಮುಖಾಂತರ ವಾಯುವ್ಯಕ್ಕೆ ಚಲಿಸಿ ಕೂಡ್ಲೂರ ಸರ್ವೆ ನಂ. 1 ರ ಪಶ್ಚಿಮ ಬಿಂದುವನ್ನು ತಲುಪಿ ನಂತರ ಕೂಡ್ಲೂರು ಗ್ರಾಮದ ಗಡಿಯ ಮೂಲಕ ಪೂರ್ವಾಭಿಮುಖವಾಗಿ ಚಲಿಸಿ ಕೂಡ್ಲೂರು ಗ್ರಾಮದ ಸ.ನಂ.15/2 ರ ಈಶಾನ್ಯ ಬಿಂದುವಿನಲ್ಲಿ ಕಾವೇರಿ ನದಿಯ ಪಶ್ಚಿಮ ದಂಡೆಯನ್ನು ತಲುಪುತ್ತದೆ. ನಂತರ ದಕ್ಷಿಣಾಭಿಮುಖವಾಗಿ ಕಾವೇರಿ ನದಿಯ ಪಶ್ಚಿಮ ದಂಡೆಯಲ್ಲಿ ಕೂಡ್ಲೂರು, ಗುಮ್ಮನಕೊಲ್ಲಿ ಮತ್ತು ಮುಳ್ಳುಸೋಗೆ ಗ್ರಾಮದ ಗಡಿಗಳ ಮೂಲಕ ಚಲಿಸಿ ಮೈಸೂರು-ಬಂಟ್ವಾಳ ರಸ್ತೆಯನ್ನು ದಾಟಿ ಸ.ನಂ. 226 ರ ಪೂರ್ವದ ಬಿಂದುವಿನಲ್ಲಿ ಮುಕ್ತಾಯಗೊಳ್ಳುತ್ತದೆ.

(ಸಿ.ಟಿ.ನಾರಾಯಣಸ್ವಾಮಿ)

ಕರ್ನಾಟಕ ಸರ್ಕಾರ

ಸಂಖ್ಯೆ. ನಅಇ 68 ಮೈಅಪ್ರಾ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 07.11.2013

ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ನಅಇ 483 ಮೈಅಪ್ರಾ 2006 ದಿನಾಂಕ 18.02.2008 ರಲ್ಲಿ ಕುಶಾಲನಗರ ಪಟ್ಟಣಕ್ಕೆ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿರುವ ಅನುಬಂಧ-I ರಲ್ಲಿನ ಕ್ರಮ ಸಂಖ್ಯೆ: (05) ರಲ್ಲಿನ ವಿವರಗಳನ್ನು ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

ಕ್ರ ಸಂ.	ಗ್ರಾಮದ ಹೆಸರು	ಸರ್ವೆ ನಂ.	ವಿಸ್ತೀರ್ಣ (ಎಕರೆ)	ಷರಾ
5.	ಮಾದಪಟ್ಟಣ	ಸ.ನಂ. 1 ರಿಂದ 9, 16, 43 ರಿಂದ 48 ಗಳನ್ನು ಹೊರತುಪಡಿಸಿ ಹಾಗೂ ಸ.ನಂ. 49ರ ಭಾಗಶಃ 392.5ಚ.ಮೀ. ಹೊರತುಪಡಿಸಿ ಉಳಿದ 107.5ಚ.ಮೀ. ಸೇರಿಸಿ ಉಳಿದ ಕಂದಾಯ ಗ್ರಾಮ	345.61	ಭಾಗಶಃ ಗ್ರಾಮ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ಎಂ.ವಾಸುದೇವ ರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕುಶಾಲನಗರ ಯೋಜನಾ ಪ್ರಾಧಿಕಾರ
ಸಂಖ್ಯೆ 397
ದಿನಾಂಕ 16/11/13

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಸದರಿ ಅಧಿಸೂಚನೆಯನ್ನು ಇಂದೇ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ ಪ್ರಕಟಿತ ಅಧಿಸೂಚನೆಯ 50 ಪ್ರತಿಗಳನ್ನು ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳನ್ನು:

1. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ.
3. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಮೈಸೂರು.
4. ಸದಸ್ಯ ಕಾರ್ಯದರ್ಶಿ, ಯೋಜನಾ ಪ್ರಾಧಿಕಾರ, ಕುಶಾಲನಗರ.
5. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಮಡಿಕೇರಿ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.